ವಿಷಯ:- ರಾಜ್ಯದ ದೇವಸ್ಥಾನಗಳಿಗೆ ಬಿಡುಗಡೆಯಾದ ಅನುದಾನ.

78(219)

ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ನಿಗಧಿಪಡಿಸಿರುವ ಅನುದಾನವೆಷ್ಟು;

ಆ) ಹಾಗಿದ್ದಲ್ಲಿ ಅನುಧಾನಕ್ಕಾಗಿ ಎಷ್ಟು ದೇವಸ್ಥಾನಗಳಿಂದ ಅರ್ಜಿಗಳು ಬಂದಿರುತ್ತದೆ ಹಾಗೂ ಅನುಧಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು).

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):-

ಅ) ರೂ. 1.26 ಕೋಟಿ.

ಆ) ದೇವಾಲಯಗಳು, ಶಾಸಕರು, ಮಂತ್ರಿಗಳು ಮತ್ತು ಇತರಿಂದ ಒಟ್ಟು 823 ಅರ್ಜಿಗಳು ಬಂದಿರುತ್ತದೆ.

ಅನುಧಾನ ಬಿಡುಗಡೆ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ:- ಕೃಷಿ ಭೂಮಿಗೆ ಹಾನಿಯಾದ ಬಗ್ಗೆ.

79(220)

ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಮಂಗಳೂರು ತೈಲಾಗಾರದಿಂದ ಎಣ್ಣೆ ಸೋರುವುದರಿಂದ ಎಷ್ಟು; ಎಕರೆ ಕೃಷಿ ಭೂಮಿಗೆ ಹಾನಿಯಾಗಿದೆ;

ಆ) ಸಂಬಂಧಪಟ್ಟ ಭೂ ಮಾಲೀಕರಿಗೆ ಎಷ್ಟು ಪರಿಹಾರ ಹಣವನ್ನು ಮಂಜೂರು ಮಾಡಲಾಗಿದೆ? (ವಿವರ ನೀಡುವುದು).

ಶ್ರೀ ಬಸವರಾಜ ನೀ. ಶಿವಣ್ಣನವರ್ (ಪರಿಸರ, ಜೀವಿಶಾಸ್ತ್ರ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು):-

ಅ) 1. ಕುತ್ತೆತ್ತೂರು ಗ್ರಾಮ 91-57 ಎಕರೆ

2. ಸೂರಿಂಜೆ 34-06 ಎಕರೆ

125-63 ಎಕರೆ

ಒಟ್ಟು 125.63 ಎಕರೆ ಜಮೀನಿಗೆ ಹಾನಿಯಾಗಿರುವುದಾಗಿ ಸಂಬಂಧಿತ ಜಿಲ್ಲಾಧಿಕಾರಿಯವರಿಂದ ತಿಳಿದುಬಂದಿದೆ.

ಆ) ಒಟ್ಟು 4.99 ಲಕ್ಷ ರೂ.ಗಳ ಪರಿಹಾರ ಹಣವನ್ನು 76 ಕುಟುಂಬಗಳಿಗೆ ಎಂ.ಆರ್.ಪಿ.ಎಲ್. ಉದ್ದಿಮೆಯು ಜಿಲ್ಲಾಧಿಕಾರಿಯವರಲ್ಲಿ ಜಮಾ ಮಾಡಿದ ಪರಿಹಾರ ಹಣದಿಂದ ಹಂಚಲಾಗಿದೆ.

ವಿಷಯ:- ಸಂಚಾರದಲ್ಲಿರುವ ವಾಹನಗಳು.

80(267)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಸಂಚಾರದಲ್ಲಿರುವ ಸರ್ಕಾರಿ ಉದ್ಯಮದ ವಾಹನಗಳೆಷ್ಟು;

ಆ) ಹಾಗೆಯೇ ರಾಜ್ಯದಲ್ಲಿ ಸಂಚಾರದಲ್ಲಿರುವ ಖಾಸಗಿ (ಸ್ಟೇಜ್ ಕ್ಯಾರಿಯೇಜ್) ಉದ್ಯಮದ ವಾಹನಗಳೆಷ್ಟು;

ಇ) ಸರ್ಕಾರಿ ಉದ್ಯಮ ಮತ್ತು ಖಾಸಗಿ ಉದ್ಯಮಗಳ ವಾಹನಗಳಲ್ಲಿ ಸರಾಸರಿ ಪ್ರಯಾಣದರದಲ್ಲಿ ಅಂತರವಿದೆಯೇ; ಹಾಗಿದ್ದಲ್ಲಿ ಎಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯ, (ಸಾರಿಗೆ ಸಚಿವರು):-

ಅ) ದಿನಾಂಕ 31-12-1996ಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ 9384 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲು 10,286 ಬಸ್ಸುಗಳ ಪಡೆಯನ್ನು ಹೊಂದಿದೆ.

ಆ) 5,265.

ಇ) ಹೌದು. ಇತ್ತೀಚೆಗೆ ಖಾಸಗೀ ಉದ್ಯಮದ ಮಾಲೀಕರು ಪ್ರಯಾಣ ದರಗಳನ್ನು ಹೆಚ್ಚಿಸಿದೆ. ಸದರಿ ಪ್ರಯಾಣ ದರಗಳಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸವಿರುತ್ತದೆ; ರಾಜ್ಯ ಸಾರಿಗೆ ಉದ್ಯಮದ ಪ್ರಯಾಣ ದರ ಶೆ. 10 ರಷ್ಟು ಕಡಿಮೆ ಇರುತ್ತದೆ.

ವಿಷಯ:- ರಾಷ್ಟ್ರೀಕೃತಗೊಂಡ ಮಾರ್ಗಗಳು.

81(268)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ, (ಬಾಗೇಪಲ್ಲಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಈಗ ರಾಷ್ಟ್ರೀಕೃತಗೊಂಡಿರುವ ಮಾರ್ಗಗಳೆಷ್ಟು; ಈ ಮಾರ್ಗದಲ್ಲಿ ಸಂಚರಿಸುತ್ತಿರುವ ಬಸ್‌ಗಳ ಸಂಖ್ಯೆ ಎಷ್ಟು;

ಆ) ಖಾಸಗಿಯವರು ಬಸ್‌ಗಳನ್ನು ಓಡಿಸುತ್ತಿರುವ ಮಾರ್ಗಗಳೆಷ್ಟು; ಮತ್ತು ಅವರು ಎಷ್ಟು ಬಸ್‌ಗಳನ್ನು ಈ ಮಾರ್ಗಗಳಲ್ಲಿ ಓಡಿಸುತ್ತಿರುತ್ತಾರೆ;